**ಹುಡ್ಗ:** ನಮ್ ಲವ್ ವಿಷ್ಯಾನ ಮನೇಲಿ ಮೆಲ್ಲಗೆ ಹೇಳಿಬಿಟ್ಟೆ.
**ಹುಡ್ಗಿ:** ವಾಹ್! ಆಮೇಲೆ ಏನಾಯಿತು?
**ಹುಡ್ಗ:** ಆಗೋದೇನು, ಮೆಲ್ಲಗೆ ಹೇಳಿದ್ರಿಂದ ಯಾರಿಗೂ ಕೇಳಿಸ್ಲಿಲ್ಲ, ಬಚಾವ್ ಆಗ್ಬಿಟ್ಟೆ.

***



ರಸ್ತೆ ಬದಿಯಲ್ಲಿ ಜನರು ತಿನ್ನಲು ಶುರು ಮಾಡಿದ ಬಳಿಕ ನನ್ನ ಬಿಸಿನೆಸ್ ಇಂಪ್ರೂವ್ ಆಗಿದೆ!




ನಿಮಗೆ ಹೇಗೆ ಟಿಕೆಟ್ ಕೊಡೋದಕ್ಕೆ ಆಗುತ್ತೆ ಹೇಳಿ? ನಿಮಗೆ ಕ್ರಿಮಿನಲ್ ಹಿನ್ನೆಲೆಯೇ ಇಲ್ಲ!

**ಡಾಕ್ಟರ್:** ಬನ್ನಿ ಉಮೇಶ್... ಏನ್ ಸಮಾಚಾರ?
**ಉಮೇಶ್:** ಸ್ವಲ್ಪ ಹುಷಾರಿಲ್ಲ ಡಾಕ್ಟರ್, ಯಾಕೋ ತಲೆಭಾರ.
**ಡಾಕ್ಟರ್:** ಡ್ರಿಂಕ್ಸ್ ಮಾಡ್ತೀರಾ?
**ಉಮೇಶ್:** ಹೂಂ... ಆದ್ರೆ ಗ್ಲಾಸ್ ತಂದಿಲ್ಲ. ನಿಮ್ ಗ್ಲಾಸಲ್ಲೇ ಸ್ವಲ್ಪ ಹಾಕ್ಕೊಡಿ.

***

**ಹೆಂಡ್ತಿ:** ರೀ... ಈ ಸಲಿ ವರಮಹಾಲಕ್ಷ್ಮಿ ಹಬ್ಬಕ್ಕೆ ಹೆಣ್ಣುಮಕ್ಕಳಿಗೆ ಅರಿಶಿಣ ಕುಂಕುಮದ ಜೊತೆ ಇನ್ನೇನು ಕೊಡಲಿ?
**ಗಂಡ:** ನನ್ ನಂಬರ್ ಕೊಡು.

***

**ಶಿಕ್ಷಕರು:** ಗಾಳಿಪಟ ಎಷ್ಟೇ ದೂರಕ್ಕೆ ಹೋದ್ರು ದಾರ ನಮ್ಮ ಕೈಯಲ್ಲೇ ಇರುತ್ತೆ. ಇದಕ್ಕೆ ಒಂದು ಉದಾಹರಣೆ ಕೊಡು.
**ವಿದ್ಯಾರ್ಥಿ:** ಮೆಸೇಜ್ ಎಷ್ಟೇ ದೂರ ಹೋದ್ರು, ಮೊಬೈಲ್ ನಮ್ಮ ಕೈಯಲ್ಲೇ ಇರುತ್ತೆ...

***

**ಹೆಡ್‌ಮಾಸ್ಟರ್:** ಐನ್‌ಸ್ಟೈನ್ ಯಾರು?
**ಸ್ಟೂಡೆಂಟ್:** ಗೊತ್ತಿಲ್ಲಾ ಸಾರ್?
**ಹೆಡ್‌ಮಾಸ್ಟರ್:** ಗಮನ ಸ್ಟಡೀಸ್ ಕಡೆ ಇರ್ಲಿ, ಆಗ ಎಲ್ಲಾ ಗೊತ್ತಾಗುತ್ತೆ.
**ಸ್ಟೂಡೆಂಟ್:** ನಿಮಗೆ ರಮೇಶ ಯಾರು ಅಂತ ಗೊತ್ತಾ?
**ಹೆಡ್‌ಮಾಸ್ಟರ್:** ಗೊತ್ತಿಲ್ಲ.
**ಸ್ಟೂಡೆಂಟ್:** ನಿಮ್ಮ ಗಮನ ನಿಮ್ಮ ಮಗಳ ಕಡೆನೂ ಸ್ವಲ್ಪ ಇರ್ಲಿ ಸರ್. ಆಗಾ ಎಲ್ಲಾ ಗೊತ್ತಾಗುತ್ತೆ.

***

**ಹುಡುಗ:** ಹಲೋ, ಪಮ್ಮಿ ಡಾರ್ಲಿಂಗ್ ಹೇಗಿದ್ದಿಯಾ?
**ಹುಡುಗಿ:** ಯಾರಿದು?
**ಹುಡುಗ:** ನಾನು ನಿನ್ನ ಪ್ರಣಯಕಾಂತ.
**ಹುಡುಗಿ:** ನೀನು ದಿವ್ಯರಾಜ್ ತಾನೆ?
**ಹುಡುಗ:** ಹೌದು, ನಿನಗೆ ಹೇಗೆ ಗೊತ್ತು?
**ಹುಡುಗಿ:** ನೀನು ನಾರಾಯಣ ಹೆಗ್ಡೆ ಮಗ ತಾನೇ?
**ಹುಡುಗ:** ನಿನಗೆ ಹೇಗೆ ಗೊತ್ತಾಯ್ತು?
**ಹುಡುಗಿ:** ನೀನು ರಂಗನ ಮೊಮ್ಮಗ ತಾನೇ?
**ಹುಡುಗ:** ಎಸ್! ಆದರೆ, ಇದೆಲ್ಲ ನಿಂಗೆ ಹೇಗೆ ಗೊತ್ತಾಯಿತು?
**ಹುಡುಗಿ:** ಕಚಡಾ ನನ್ಮಗನೇ. ನಿನ್ನಮ್ಮ ಕಣೊ ನಾನು. ನೀನು ಕುಡಿದು 'ಪಮ್ಮಿ'ಗೆ ಕಾಲ್ ಮಾಡುವುದರ ಬದಲು 'ಮಮ್ಮಿ'ಗೆ ಮಾಡಿದ್ದೀಯ!

***

ರಾತ್ರಿ 2 ಗಂಟೆಗೆ ಕುಡಿದು ಬಂದ ಗಂಡನನ್ನು ನೋಡಿದ ಹೆಂಡತಿ ಪೊರಕೆ ಕೈಯಲ್ಲಿ ಹಿಡಿದು ಅವನ ಮುಂದೆ ಬಂದು ನಿಲ್ಲುತ್ತಾಳೆ. ಆಗ ಗಂಡ ಹೀಗೆ ಹೇಳುತ್ತಾನೆ.
**ಗಂಡ:** ಚಿನ್ನ ದಿನವಿಡೀ ಎಷ್ಟು ಅಂತ ಕೆಲಸ ಮಾಡ್ತಿಯಾ? ಸಾಕು ಮಲಗು.
**ಹೆಂಡತಿ:** ಒಂದ್ ಕೆಲಸ ಬಾಕಿ ಇದೆ ರೀ... ಮುಗಿಸಿ ಇಬ್ರೂ ಮಲಗೋಣ.

***

**ಪತಿ:** ನೀನು ಮದುವೆಯಾದಾಗ ಹೀಗಿರಲಿಲ್ಲ ಕಣೆ.
**ಪತ್ನಿ:** ನೀವು ಅಷ್ಟೇ ಕಣ್ರಿ.
**ಪತಿ:** ನಿನಗೆ ನಾನೇನು ಮಾಡಿದೆ?
**ಪತ್ನಿ:** ಅಲ್ರೀ, ನಾನು ಕೋಪಿಸಿಕೊಂಡು ತವರಿಗೆ ಹೋಗ್ತೀನಿ ಅಂದ್ರೂ ಒಂದು ತಡೆಯೋದೇ ಇಲ್ಲ!

***

**ಟೀಚರ್:** ಸಾಯುವಾಗ ಬಾಯಲ್ಲಿ ಏನು ಹಾಕಬೇಕು.
**ಗುಂಡ:** ಬಿರ್ಲಾ ಸಿಮೆಂಟ್ ಮೇಡಂ.
**ಟೀಚರ್:** ಯಾಕೆ?
**ಗುಂಡ:** ಇದರಲ್ಲಿ ಜೀವ ಇದೆ.

ಸಂಗ್ರಹ: **ಭಾರತೀ ಗಂಗಾಧರ್, ಬೆಂಗಳೂರು**


